ಆದ್ರೂ ನನ್ನ ಒಂದು ಮಾತು ಕೇಳೇ ಕೇಳತಿದ್ಲು. ಊರಾಗಿನವ್ರು ನೆರೆ ಊರಾಗಿನವ್ರು ತಮ್ಮ ಮನ್ಯಾಗ ಸೊಸ್ತಾಯರು ಅಥವಾ ನೆಗೆಣ್ಣೆಮಕ್ಕಳು ದಾಗೀನು ಕಳು ಮಾಡಗಿಡ್ಯಾರಂತ ಭಾಳ ನಂಬಿಕೆಯಿಂದ ಗೌರವ್ವ, ಗೌಡಶಾನಿ ತಾಬೆಕ ಗಂಟು ಇಟ್ಟ ಬರತಿದ್ರು, ಹೊತ್ತಹೊಂಟ್ರ ಹೊಲದ ದಗದಕ್ಕ ಹೋಗೋ ಹೆಣ್ಣುಮಕ್ಕಳು ಮನಿಗೆ ಬರೋದು ಸಂಜಿಕ, ಹೀಗಾಗಿ ಮನ್ಯಾನ ದಾಗೀನ ವಗಾತೀಲೇ ಜೋಪಾನವಾಗಿ ಇರಲಿ ಅಂತಾ ನಂಬಕಿಯಿಂದ ಗೌಡಶಾನಿ ಕಡೆ ಇಡತಿದ್ದುದು ಸುತ್ತ ಏಳು ಹಳ್ಳಿಗೆ ಗೊತ್ತು, ಇಂತಾದರಾಗ ಆಕಿ ತನ್ನ ಪ್ರೀತಿ ಗೆಳತಿ ಸಾವಂತ್ರಿ ದಾಗೀನ ಮುಣಗಿಸಲಿಕ್ಕೆ ಹೆಂಗ ಸಾಧ್ಯ' ಚಂಬಣ್ಣ ಶಟ್ರ ಈ ಮಾತನ್ನು ಕೇಳಿ ಊರ ದೈವ ಇದು ಸತ್ಯ ಅಂತಾ ತೆಲೆತೂಗಿದ್ರು. ನಂತರ ಹಿರಿಯರ ತೀರ್ಮಾನದಂಗ ಒಂದು ತಿಂಗಳು ತಡೆದು ನ್ಯಾಯ ನಿರ್ಣಯ ಮಾಡೋಣು ಅಂದ್ರು. ಆಗ ಎಲ್ಲರೂ ಒಪ್ಪಿಗೆ ಸೂಚಿಸಿದ್ರು.

'ಬೆಳಕಾಗುತ್ತೆ ಇವಕ್ಕ ಏನ ಪಿಡಗು ಬರತದೇ ಗೊತ್ತಿಲ್ಲ, ಗುಮ್ಮ ಅಂತ ಬಂದು ಕಾಲ ಮುಕ್ಕರತಾವು. ಈ ಬೇವಾರ್ಸಿ ಸೂರ್ಯಗೂ ಬ್ಯಾರೆ ದಗದಾನ ಇಲ್ಲಾ. ಹರ‍್ಯಾಗ ಬೆಳಕ ಹರಡಿ ನಮ್ಮನ್ನ ಜೀತದ ಬಾಳೆಕ ದುಡಸಾಕ ಜಲಮಾ ಹಿಂಡತಾನ' ಕರಿಯ ಗ್ವಾತಾ ಬಳಕೊತ ಲೊಚಗುಟ್ಟೋದು 20 ವರ್ಷಗಳಿಂದಲೂ ಮಾಮೂಲಿ ಆಗಿತ್ತು. ಬಸಲಿಂಗಪ್ಪನ ಮನಿ ಆಳು ಕರಿಯನ ಗೊಗ್ಗರ ದನಿನೇ ದಿನಾ ಎಲ್ಲರಿಗೂ ಸುಪ್ರಭಾತ. ಅವನ ಧ್ವನಿಗೆ ಗೌರವ್ವಗ ಎಚ್ಚರ ಆದರೂ ಹಾಸಿಗಿ ಬಿಟ್ಟು ಎಳಬೇಕು ಅಂತಾ ಅನಸಲಿಲ್ಲ. ಮನಸ್ಸು ಭಾರವಾಗಿತ್ತು. 'ಹಿಂಗ ಕೂಡಿದ ಮಂದ್ಯಾಗ ಆಣೆ ಪ್ರಮಾಣ ಮಾಡುವ ಸಂದರ್ಭ ಬರತೇತಿ ಅಂತಾ ಕನಸಿನ್ಯಾಗು ಗೊತ್ತಿರಲಿಲ್ಲ. ಆಗಲಿ ನನ್ನ ಧರ್ಮಕ್ಕ ಜಯ ಸಿಕ್ಕ ಸಿಗತದ' ಅಂತಾ ಗೌರವ್ವ ಎದ್ದು ಮನಿದೇವ್ರನ್ನ ನೆನೆದು ಕೆಲಸಕ್ಕ ಅಣಿಯಾದಳು. ದಿನಗಳು ಹಿಂಗ ಉರುಳಿದವು.

ತಿಂಗಳಾಗಾಕ ದಿನಾ ಸಮೀಪ ಬಂದವು. ಈವರೆಗೂ ಯಾರಿಗೂ ಏನೂ ಸುಳಿವು ಸಿಕ್ಕಿರಲಿಲ್ಲ. ಊರವರು ಅವರವರ ಪಾಡಿಗೆ ಹೊಲಮನಿ ಕೆಲಸಕ್ಕೆ ತೊಡಗಿಕೊಂಡಿದ್ರು. ಹುಣ್ಣಿಮೆ ಹಿಂದಿನ ದಿನ ಕಮಲಮ್ಮಗ ಯಾಕೋ ಜ್ವರ ಕಾಣಿಸಿಕೊಂಡವು. ಒಮ್ಮಿಲೇ ಜೋರಾಗಿ ಕೆಮ್ಮು ಚಾಲು ಆತು. ಎರಡು ದಿನ ಆದರೂ ಜ್ವರ ಕಮ್ಮೀನ ಆಗಲಿಲ್ಲ. ನೋಡತಾ ನೋಡತಾ ಹಾಸಿಗೆ ಹಿಡದ್ಲು. ಈ ಸುದ್ದಿ ಗೌಡಶಾನಿಗೆ ಮುಟ್ಟಿತು. 'ಯಾಕ ಹಿಂಗ ಆತು. ಪಾಪ ಕಮಲವ್ವ ಎರಡು ಮಕ್ಕಳ ತಾಯಿ. ಆಕಿಗ ಏನಾದರೂ ಆದ್ರೆ ಮಕ್ಕಳು ಅನಾಥ ಆಕ್ತಾವ' ಅಂತಾ ತಳಮಳಿಸಿದ್ಲು. ನೋಡತಾ ನೋಡತಾ ಕಮಲವ್ವಗ ಹಾಸಿಗೆಯಿಂದ ಏಳಾಕ ಬರದಂಗ ಆತು. ತಿಂಗಳ ಪೂರ್ತಿ ಆಗಾಕ ಇನ್ನೇನು ಎರಡ ದಿನಾ ಉಳಿದಿದ್ವು. ಕಮಲವ್ವಗ ಇನ್ನೂ ತನ್ನ ತಪ್ಪಿನ ಅರಿವು ಆಗಿರಲಿಲ್ಲ. ದಾಗೀನ ಆಸೆಕ ಧರ್ಮ ದೇವತೆಯಂತಹ ಗೌಡಶಾನಿ ಮ್ಯಾಲ ಅಪವಾದ ಹಾಕಿ ಅವಮಾನ ಮಾಡಿದ್ದು ಆಕಿ ದೃಷ್ಟಿಯಿಂದ ತಪ್ಪ ಆಗಿರಲಿಲ್ಲ.

ಸರಿಯಾಗಿ ಒಂದು ತಿಂಗಳು ಆಗಿತ್ತು. ಮಾತಿನ ಪ್ರಕಾರ ದಾಗೀನ ಜಗಳಾ ಬಗಿಹರಸಾಕ ಪಂಚಾಯ್ತಿ ಸೇರಿದ್ರು. ಗೌರಮ್ಮನಿಗೆ ತನ್ನ ನ್ಯಾಯದ ಬಗ್ಗೆ, ದೇವರ ಬಗ್ಗೆ ,ದೈವದ ಬಗ್ಗೆ ಅಪಾರ ನಂಬಿಕೆಯಿತ್ತು. ಕಿಂಚಿತ್ತು ತಳಮಳಿಸದ ಪಂಚಾಯತಿ ಕಟ್ಟೆಗೆ ಬಂದ್ಲು. ಸಾವಂತ್ರಿ ಸೊಸಿ ಕಮಲವ್ವನ ಬಗಲಾಗ ಇಬ್ಬರ ಕೈ ಹಾಕಿ ಹಗರಕ ನಡಸಕೊತ ಬಂದ್ರು.

ಊರ ಹಿರಿಯ ಆದ ಗುರುಸಿದ್ದಪ್ಪ ಎರಡು ಮನೆತನಗಳ ಬಗ್ಗೆ ಅವರ ಸ್ನೇಹ ಸಂಬಂಧಗಳ ಬಗ್ಗೆ ಹೇಳಿ ಕಣ್ಣೀರ ಹಾಕತಾ ಹಿಂಗ ಆಗಬಾರದಿತ್ತು ಅಂತಾ ಹೇಳತಾ, ಗೌಡಶಾನಿ ಗೌರಮ್ಮ ಒಂದು ಬುಗುಡಿ ಮತ್ತು ಪದಕದ ಸರವನ್ನು ಸಾವಂತ್ರಿ ಸೊಸಿಗೆ ಮರಳಿ ಕೊಡಬೇಕು ಅಂತಾ ತೀರ್ಮಾನ ಹೇಳಿದರು.

ಈ ಮಾತು ಗೌರವ್ವ ಗೌಡಶಾನಿ ಕಿವಿಗೆ ಬಿದ್ದದ್ದ ತಡಾ ದೇವರಿಗೆ, ದೈವಕ್ಕ ಕೈ ಮುಗಿದು, 'ನಾ ಮಾಡದಿರುವ ಅನ್ಯಾಯಕ್ಕ ನಾ ಬೆಲೆ ತೆರಬೇಕಾತು. ನನ್ನ ಮೇಲೆ ವಿಶ್ವಾಸ ಇಟ್ಟು ನಂಬಿಕೆಯಿಂದ ನೂರಾರು ಜನ ಅವ್ವಕ್ಕಗಳು ಗಂಟಕೊಟ್ಟಾರ. ನಾ ಈಗಲೂ ಎಲ್ಲರ ನಂಬಿಕೆ ಪ್ರಕಾರ ನಡಕೊಂಡೆನಿ. ಆ ದೇವರು ಈ ದೈವದ ಸಾಕ್ಷಿಯಾಗಿ, ನಾ ಯಾರಿಗೂ ಮೋಸ ಮಾಡಿಲ್ಲ, ಹಂಗ ಸಾವಂತ್ರಿ ದಾಗೀನ ನಾ ಮೋಸದಿಂದ ಇಟಕೊಂಡಿಲ್ಲ. ಇದು ಮನೆ ದೇವರ ಮ್ಯಾಲೆ ಆಣೆ ಆಣೆ ಆಣೆ' ಅಂತಾ ಮಾತು ಮುಗಿಸೊ ಹೊತ್ತಿಗೆ, ಕಮಲವ್ವ ಒಮ್ಮೆಲೇ ತೆಲೆಕೆದರಿ